ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜವಾದರೆ ನಾನು ಅಲ್ಲಿಂದ ವರದಿಯನ್ನು ತರಿಸಿನೋಡಿ, ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ, ಇದು ಬಹಳ ಸೂಕ್ಷ್ಮವಾದ ವಿಚಾರ. ನಾನು ಹೇಳುತ್ತಿರುವುದು ಸುಳ್ಳೇ ? "ಇವರು ಹೇಳುತ್ತಿರುವುದು ನಿಜವಾದರೆ" ಎಂದು ಮಾನ್ಯ ಸಚಿವರು ಹೇಳುತ್ತಿರುವುದು ನನಗೆ ಅಪಮಾನವಾಗುತ್ತಿದೆ.

ಅಧ್ಯಕ್ಷರು.—ತಾವು ಹೇಳಿರುವುದೆಲ್ಲಾ ಸತ್ಯ ಎಂದು ಅವರು ವರದಿಯನ್ನು ತರಿಸಿಕೊಂಡು ನೋಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಹಾಗಾದರೆ ನಾನು ಹೇಳುತ್ತಿರುವುದು ನಿಜವಲ್ಲವೆ ? ಮುನಿಸಿ ಪಾಲಿಟಿಯವರು ಬರೆದಿರುವ ಸೈನ್ ಇದೆ. ಇದು ನಿಜವೆಂದು ಆದರೆ ತಾವು ಆ ಮುಖ್ಯೋಪಾಧ್ಯಾಯರನ್ನು ಮತ್ತು ಉಳಿದ ಉಪಾಧ್ಯಾಯರನ್ನೂ ಸಸ್ಪೆಂಡ್ ಮಾಡುತ್ತೀರಾ ! ಅದಲ್ಲದಿದ್ದರೆ ನನಗೆ ಏನು ಬೇಕಾದರೂ ಮಾಡಿ.

ಅಧ್ಯಕ್ಷರು.—ಈ ರೀತಿ ಥ್ರಾಲೆಂಜ್ ಮಾಡುವ ಹವ್ಯಾಸವನ್ನು ಬಿಟ್ಟುಬಿಡಿ. ಪ್ರತಿಯೊಂದಕ್ಕೂ ಕೆಲವು ನಿಯಮಗಳು ಇವೆ. ನೀವು ಇಲ್ಲಿ ಹೇಳಿದ ಕೂಡಲೇ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಸಚಿವರು ಹೇಳುವುದಕ್ಕಾಗುತ್ತದೆಯೆ ?

ಶ್ರೀ ಆರ್. ಎನ್. ನಾಯಕ್.—ನನಗೂ ಇದರ ಅರಿವು ಇದೆ. ಭಟ್ಕಳ ಏರಿಯಾ ಎಂಥ ಬಾಗ ಎಂಬುದೂ ತಮಗೆ ಗೊತ್ತಿದೆ. ಅಲ್ಲಿ ಕೋಮುವಾದ ಗಲಭೆಗೆ ಅವಕಾಶ ಆಗುತ್ತದೆ. ಆ ಭಟ್ಕಳ್‌ದಲ್ಲಿ ಎಂಥ ವಿದೇಶೀ ಮಾಲು ಬೇಕಾದರೂ ಸಿಗುತ್ತದೆ.

ಅಧ್ಯಕ್ಷರು.—ವಿಷಯ ಬಹಳ ಸೂಕ್ಷ್ಮವಾದುದು ಎಂದು ಹೇಳುತ್ತಿದ್ದೀರಿ. ಆದರೆ ತಾವು ಏಕೆ ಅಷ್ಟೊಂದು ಎಮೋಷನ್ ಆಗಿ ಮಾತನಾಡುತ್ತೀರಿ. ಅವರು ವರದಿಯನ್ನು ತರಿಸಿ ನೋಡುತ್ತೇನೆಂದು ಹೇಳಿದ್ದಾರಲ್ಲಾ, ಇನ್ನೇನುಬೇಕು !

ಅಧ್ಯಕ್ಷರು—ಸ್ವಾಮಿಂಗಾಪ್‌ರವರೆ, ತಾವು ಇಲ್ಲಿ ಕಳುಹಿಸಿಕೊಟ್ಟಿರುವ ನೋಟೀಸನ್ನು ನೋಡಿ ತವಂಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಸಾಧ್ಯವಾದಷ್ಟೂ ಇಂಡಿವಿಜುಯಲ್ ಮ್ಯಾಟರ್ಸ್‌ನ್ನು ಅವಾಯ್ಡ್ ಮಾಡಬೇಕು. ಏಕೆಂದರೆ ಇಂಥ ವಿಚಾರಗಳನ್ನೆಲ್ಲಾ ಈ ಸದನದಲ್ಲಿ ಪರಿಹಾರ ಮಾಡುವುದಕ್ಕಾಗುವುದಿಲ್ಲ. ಇನ್ನು ಮುಂದೆ ಈ ರೀತಿಯ ವಿಚಾರಗಳನ್ನು ದಯವಿಟ್ಟು ಕಳುಹಿಸಿಕೊಡಬೇಡಿ.

ಶ್ರೀ ಬಿ. ಸ್ವಾಮಿರಾವ್.—ಸ್ವಾಮಿ, ನಾವು ಇಂಥಾದ್ದನ್ನು ಅವಾಯ್ಡ್ ಮಾಡಿದರೆ ಸಮಸ್ಯೆಗಳು ಬಗಿಹರಿಯುವುದಾದರೂ ಹೇಗೆ ?

ಅಧ್ಯಕ್ಷರು.—ಯಾರು ಈ ಸದನದಲ್ಲಿ ಬಂದು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಅಂಥ ವರ ಹೆಸರನ್ನು ದಯವಿಟ್ಟು ಹೇಳಬೇಡಿ.

ಶ್ರೀ ಬಿ, ಸ್ವಾಮಿರಾವ್.—ಹಾಗಾದರೆ ಈ ರೀತಿ ನೊಂದವರಿಗೆ ಏನು ಪರಿಹಾರ ಒದಗಿಸಿಕೊಡುತ್ತೀರಿ

ಅಧ್ಯಕ್ಷರು.—ಯಾವುದೇ ವಿಷಯವಾಗಲಿ ಸರಿಯಾಗಿ ಇರಬೇಕು. ಆದರೆ ಆ ಮನುಷ್ಯ ಸಭೆಗೆ ಬಂದು ಆ ವಿಚಾರದಲ್ಲಿ ಸಮರ್ಥನೆ ಮಾಡಿಕೊಳ್ಳುವಂತಿರಬೇಕು.

(iii)ಕುಂದಗೋಳ ತಾಲ್ಲೂಕಿನ ಇಂಗಳಗಿಯ ಯಲ್ಲಪ್ಪಗೌಡನ ಮನೆ ಲೂಟಿ ಮಾಡಿದ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕು ಇಂಗಳಗಿ ಗ್ರಾಮದಲ್ಲಿ ತಾರೀಖು ೨೮-೨-೮೯ರಂದು ಸಂಜೆ ೬ ಗಂಟೆಯ ಸಮಯದಲ್ಲಿ ಹುಲ್ಲಪ್ಪಗೌಡ ಗಾವುನಗೌಡ ಮುಲ್ಕಿ ಪಾಟೀಲ ಎನ್ನುವವರ ಹೆಂಡತಿ ಶಂಕರವ್ವ ಎನ್ನುವವರು ಮನೆಯಲ್ಲಿರುವಾಗ ಅದೇ ಊರಿನ ಶ್ರೀಮಂತ ರಾಯನಗೌಡ ಮತ್ತು ಅವರ ಅಣ್ಣ ಫಕೀರಗೌಡ ಮುಲ್ಕಿ ಪಾಟೀಲರು ತಮ್ಮ ಆಳುಗಳೊಡನೆ ಯಲ್ಲಪ್ಪ ಗೌಡನ ಮನೆಗೆ ನುಗ್ಗಿ ಮನೆಯ ಸಾಮಾನುಗಳನ್ನೆಲ್ಲಾ ಕಿತ್ತುಹಾಕಿ, ಮನೆಯನ್ನು ಕೆಡವಿ, ಕೈಗೆ ಸಿಕ್ಕಿದ್ದನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಈಗ

ಯಲ್ಲಪ್ಪಗೌಡನ ಮನೆಯವರು ಬೀದಿಯಲ್ಲಿ ಬಿದ್ದಿದ್ದಾರೆ. ಹಿಂದೆ ಇದೇ ರೀತಿಯಲ್ಲಿ ೨-೩ ಸಾರಿ ಗಲಾಟೆಗಳಾಗಿವೆ. ಅವರ ಮನೆಯನ್ನು ಮುರಿದು ಸಾಮಾನುಗಳನ್ನು ದೋಚಿಕೊಂಡು ಹೋಗಿದ್ದಾರೆ. ಇಷ್ಟೇ ಅಲ್ಲ ಅವರ ಅಣ್ಣನ ಗಂಡನನ್ನು ಕೊಲೆ ಮಾಡಿ ಆತನ ಮಾಂಸವನ್ನು ಮಿಲಿಟರಿ ಹೋಟೆಲ್‌ಗೆ ಕಳುಹಿಸಿಕೊಡುತ್ತೇವೆಂದು ಕೂಡ ಹೆದರಿಕೆಯನ್ನು ಹಾಕಿದ್ದಾರೆ. ಇಷ್ಟಾದರೂ ಸಂಬಂಧಪಟ್ಟ ಅಧಿಕಾರಿಗಳು ಆರೋಪಿಗಳ ಮೇಲೆ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ. ಇಂಥ ಗಂಭೀರ ಪ್ರಕರಣಗಳನ್ನೂ ಇಲ್ಲಿ ಪ್ರಸ್ತಾಪ ಮಾಡಬಾರದೆಂದು ತಾವು ಹೇಳುವುದಾದರೆ ಈ ಸಮಸ್ಯೆಯನ್ನು ಯಾವರೀತಿ ಬಗೆಹರಿಸುತ್ತೀರಿ ? ಅಥವಾ ಈ ನೊಂದವರಿಗೆ ಯಾವರೀತಿ ಪರಿಹಾರವನ್ನು ಕೊಡುತ್ತೀರಿ ಎಂಬುದನ್ನು ನಾನು ಕೇಳಬಯಸುತ್ತೇನೆ.

ಅಧ್ಯಕ್ಷರು.—ತಾವು ಹೇಳಿದ್ದನ್ನು ಅರ್ಥಮಾಡಿಕೊಂಡಿರುತ್ತೇನೆ. ಅದರ ಬಗ್ಗೆ ಹೆಚ್ಚಿನ ವ್ಯಾಖ್ಯಾನ ಮಾಡುವುದು ಬೇಡ. ಹೇಳಿದ್ದರೂ ನಿಮಗೆ ಅವಕಾಶ ಇದೆ ಎಂದು ಅದನ್ನೂ ಈಗೀತಾ ಉಪಯೋಗಿಸಿಕೊಳ್ಳುವುದು ಸೂಕ್ತವಲ್ಲವೆಂದು ತಿಳಿದುಕೊಂಡರೆ ಸರಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ತಾವೇ ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡುತ್ತಾ ಭಾಗಶಃ ಹೇಳಿದಂತಾಗಿರುತ್ತದೆ. ಪೋಲೀಸ್‌ಸವರಿಗೆ ದೂರು ಕೊಟ್ಟರೂ ಸಹ ರಿಜಿಸ್ಟರ್ ಮಾಡಿಕೊಳ್ಳಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿರುತ್ತಾರೆ ಮತ್ತು ಮುಂದಿನ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆಂದು ಹೇಳಿರುತ್ತಾರೆ. ಇಲ್ಲಿ ನೇರವಾಗಿ ಪೋಲೀಸ್‌ನವರು ತಪ್ಪು ಮಾಡಿದ್ದಾರೆಂದು ಯಾಪ ತೀರ್ಮಾನಕ್ಕೂ ಬರಲು ಸಾಧ್ಯವಾಗುವುದಿಲ್ಲ ಮಾನ್ಯ ಸದಸ್ಯರು ಪ್ರಸ್ತಾಪನೆ ಮಾಡಿದಹಾಗೆ ತಕ್ಷಣ ಪರಿಹಾರವನ್ನು ಕೊಡುವುದು ಸುಲಭವಾದರೂ ಅದನ್ನು ವಿಚಾರಿಸಬೇಕಾಗಿರುತ್ತದೆ.

ಶ್ರೀ ಎಂ. ಸ್ವಾಮಿರಾವ್.—ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಇಲಾಖೆಯವರಿಗೆ ಈ ವಿಚಾರವನ್ನು ಕಳುಹಿಸಿಕೊಡುತ್ತಾರೆಯೇ ಎಂದು ಕೇಳುತ್ತೇನೆ. ಏತಕ್ಕೆಂದರೆ ಇಬ್ಬರು ಮಂತ್ರಿಗಳು ಇದ್ದರೂ ಕೂಡ ನಟ್ಟು ಕಾನೂನು ಮಂತ್ರಿಗಳು ಈ ರೀತಿಯಾದ ಉತ್ತರವನ್ನು ಕೊಡುತ್ತಿರತಕ್ಕಂಥ ಉದ್ದೇಶ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇದು ಧಾರವಾಡದ ಎರಡು ಕುಟುಂಬಗಳಲ್ಲಿ ನಡೆದಂಥ ಪ್ರಕರಣ.

ಧಾರವಾಡ ಜಿಲ್ಲಾ ಕುಂದುಗೋಡು ತಾಲ್ಲೂಕಿನ ಇಂಗಳಗಿ ಗ್ರಾಮದ ಎಲ್ಲಪ್ಪ ಗೌಡರ ಪತ್ನಿ ಶ್ರೀಮತಿ ಶಂಕರಪ್ಪ ಎಂಬುವರು ಕುಂದಗೋಡು ಪೋಲೀಸ್ ಠಾಣೆಗೆ ತಾರೀಖು ೯-೨-೮೪ ರ ಮಧ್ಯಾಹ್ನ ಸುಮಾರು ೨ ಗಂಟೆ ಸಮಯದಲ್ಲಿ, ಅದೇ ಗ್ರಾಮದ ೧. ರಾಯನಗೌಡ ತಂದೆ ಅಡವಪ್ಪಗೌಡ ಮುಲ್ಕಿ ಪಾಟೀಲ್ ೨. ಪೆಯಗೌಡ ಅಡಿಯಾರ್ ಎಸ್. ಪಾಟೀಲ್ ೩. ಲಿಂಗನಗೌಡ ಬಸವನಗೌಡ ಕುರಹಟ್ಟಿ, ೪. ನಾಗಪ್ಪ ದಾನಪ್ಪ ಹುಬ್ಬಳ್ಳಿ, ೫ ನಾರಾಯಣಪ್ಪ ಸಂಸಿ, ೬. ರಾಚಪ್ಪ ಕಬ್ಬಿ, ೭. ಗಫಾರ್‌ಖಾನ್‌ಸಣ್ಣೂರು ೮. ಸಿದ್ದಪ್ಪ ಸರ್ಕಾರು, ಈ ಎಲ್ಲ ಆಪಾದಿತರು ತಮ್ಮ ಮನೆಯ ಮೇಲಿನ ತಗಡುಗಳನ್ನು ತೆಗೆದು, ೪ ತಗಡುಗಳನ್ನು ಮತ್ತು ೪ ತೆಗದ ದಮ್ಮಿಗಳನ್ನು ಕೆಲವು ಮನೆಯ ಉಪಯೋಗದ ವಸ್ತುಗಳು ಹೀಗೆ ರೂ. ೨೯೬೦ ಬೆಲೆಬಾಳುವ ವಸ್ತುಗಳನ್ನು ಕಳುವು ಮಾಡಿಕೊಂಡು ಹೋದರೆಂದು ದೂರುತ್ತಾರೆಂದು ವರದಿಯಾಗಿದೆ ಈ ದೂರಿನಮೇಲೆ ಕುಂದುಗೋಳ ಪೋಲೀಸ್ ಠಾಣೆಯಲ್ಲಿ ೪೨/೮೨, ಅಂಡರ್ ಸೆಕ್ಷನ್, ೪೫೪, ೪೮೦, ೪೨೭, ಐ.ಪಿ.ಸಿ. ರೀತ್ಯ ಮೊಕದ್ದಮೆಯನ್ನು ನೊಂದಾಯಿಸಿಕೊಳ್ಳಲಾಗಿದೆ.

ತನಿಖೆಯ ಸಮಯದಲ್ಲಿ ಈ ಪ್ರಕರಣ ದರೋಡೆ ಪ್ರಕರಣವಲ್ಲವೆಂದು ತಿಳಿದು ಬಂದಿದೆ. ಶ್ರೀಮತಿ ಗಂಗವ್ವ ಇವರ ಪತಿ ಶ್ರೀ ಎಲ್ಲಪ್ಪಗೌಡ ಮುಲ್ಕಿ ಪಾಟೀಲ್ ಇಂಗಳಗಿ ಮತ್ತು ಆಪಾದಿತರಾದ ರಾಯನಗೌಡ ಇವರಲ್ಲಿ ಒಂದು ಪ್ರಕರಣ ಕುಂದು ಗೋಳ ನ್ಯಾಯಾಲಯದಲ್ಲಿ ನಡೆದಿತ್ತೆಂದು ತಿಳಿದು ಬಂದಿದೆ. ಎಸ್. ಡಿ. ಪಿ. ಒ. ಇವರು ಇಂಗಳಗಿ ಗ್ರಾಮಕ್ಕೆ ಭೇಟಿಯಿತ್ತು ತನಿಖಾಧಿಕಾರಿಗಳಿಗೆ ಚಾರ್ಜ್‌ಶೀಟನ್ನು ಸೆಕ್ಷನ್ ೪೫೧, ೪೮೦, ೪೨೭ ಐ ಐಪಿಸಿ ಪ್ರಕಾರ ಹಾಕಲು ಸೂಚನೆ ಇತ್ತಿದ್ದಾರೆ. ನಂತರ ತನಿಖೆಯಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಲಿಂಗನಗೌಡ ಬಸವನಗೌಡ ಇವರನ್ನು ದಿನಾಂಕ ೧೫-೩-೮೪ರಂದು ದಸ್ತಗಿರಿ ಮಾಡಿದ್ದಾರೆ ಇವರನ್ನು ನ್ಯಾಯಾಲಯವು ದಿನಾಂಕ೨೬-೩-೮೪ರಂದು ಬಿಟ್ಟಿದೆ ಇನ್ನೊಬ್ಬ ಆಪಾದಿತ ರಾಯಪ್ಪಗೌಡ ಇವರನ್ನು ದಿನಾಂಕ ೧೭-೩-೮೪ರ ಸಾಯಂಕಾಲ ೭-೪೫ಘಂಟೆಗೆ ದಸ್ತಗಿರಿ ಮಾಡಿದ್ದಾರೆ.

ಇವರನ್ನು ಕೋರ್ಟು ಜಾಮೀನಿನ ಮೇಲೆ ಬಿಟ್ಟಿದೆ. ಇದೇ ದಿನ ನಾಗಪ್ಪ ದೇವಪ್ಪ ಪಬ್ಬಳ್ಳಿ ಇವರನ್ನು ಕೂಡ ದಸ್ತಗಿರಿ ಮಾಡಿದ್ದಾರೆ ಮತ್ತು ಇವರನ್ನೂ ಕೂಡಾ ನ್ಯಾಯಾಲಯವು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ. ಇನ್ನಿತರ ಆಪಾದಿತರು ತಲೆ ಮರೆಸಿಕೊಂಡಿದ್ದಾರೆ. ರೂ. ೨,೯೬೦ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ಇಷ್ಟರಲ್ಲೇ ಚಾರ್ಜ್‌ಷೀಟ್ ಹಾಕುವ ಸಂಭವ ಇದೆ.

(iv) ಸಂಕೇಶ್ವರದಲ್ಲಿ ಕುಡಿಯುವ ನೀರಿನ ತೊಂದರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ ಸಂಕೇಶ್ವರದಲ್ಲಿ ಕುಡಿಯುವ ಬಹಳನೀರಿಗೆ ತೊಂದರೆಯಾಗಿದೆ ಎನ್ನುವ ವಿಷಯವನ್ನು ಸನ್ಮಾನ್ಯ ಮಂತ್ರಿಗಳಿಗೆ ಅರಿಕೆ ಮಾಡಿಕೊಂಡು ಪ್ರಸ್ತಾವ ಮಾಡಿದ್ದೆ. ಮಾನ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಗಮನ ಹರಿಸಿದರೋ ಇಲ್ಲವೋ ಗೊತ್ತಾಗುತ್ತಿಲ್ಲ. ಇದರಿಂದ ಏನಾಗಿದೆ ಎಂದರೆನಾನು ಊರಿಗೆ ನೀರವಾಗಿ ಹೋಗುವುದಕ್ಕೆ ಆಗುವುದಿಲ್ಲ. ನೀರಿಗಾಗಿ ಪರಿತಪಿಸುತ್ತಿರುವ ಹೆಣ್ಣು ಮಕ್ಕಳು ಫೇರಾವೂ ಮಾಡುವ ಸಂಭವ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಆದೇಶವನ್ನು ಕೊಡಬೇಕು. ತಾವು ಯಾವಾಗ ಹೋಗುತ್ತೀರಿ ತಿಳಿಸಬೇಕು. ವಿಷಯವನ್ನು ಗಮನಕ್ಕೆ ತಂದಾಗ ಬೀದರ್ ಗುಲ್ಬರ್ಗಾ ಈ ಭಾಗಕ್ಕೆ ಹೋಗಿದ್ದೆ ಎಂದು ಹೇಳುತ್ತಿದ್ದಾರೆ ನಿರ್ದಿಷ್ಟವಾಗಿ ಇಂಥ ದಿವಸ ಹೋಗಿದ್ದೆ ಎಂಬುದನ್ನು ಹೇಳುತ್ತಿಲ್ಲ. ನಾವೇನೋ ಇಲ್ಲಿರುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿರುತ್ತೀರಾ. ಆದರೆ ಅಲ್ಲಿರುವವರ ವ್ಯವಸ್ಥೆಯ ಬಗ್ಗೆ ನೋಡಬೇಕಾಗಿರುತ್ತದೆ. ೨೧ ಸಾವಿರ ಜನಸಂಖ್ಯೆ ಇರುವ ನಮ್ಮ ಭಾಗಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಏತಕ್ಕೆಂದರೆ ಪರೀಕ್ಷೆಯ ಕಾಲ ನೀರಿಗೆ ತೊಂದರೆ ಇರುವುದರಿಂದ ಒಂದು ಮೈಲಿ ಎರಡು ಮೈಲಿ ದೂರದಿಂದ ನೀರನ್ನು ತರಬೇಕಾದ ಸಂದರ್ಭವಿರುತ್ತದೆ. ಆದ್ದರಿಂದ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಿರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಎರಡು ಸಾವಿರ ಕೊಳವೆ ಬಾವಿಗಳಿಗೆ ಪಂಪ್‌ಗಳನ್ನು ಅಳವಡಿಸತಕ್ಕಂಥ ಅಭಿಪ್ರಾಯವನ್ನು ಇಟ್ಟುಕೊಂಡಿರುತ್ತೇವೆ ಅದರಲ್ಲಿ ಬಹಳ ಮುಖ್ಯವಾಗಿ ತಪ್ಪು ಪ್ರದೇಶವಾದ ಬೀದರ್ ಜಿಲ್ಲೆಯೂ ಬರುತ್ತದೆ. ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ರಿಗ್‌ಗಳನ್ನು ತೆಗೆದುಕೊಂಡು ಹೋಗಲು ಪಿ. ಎಚ್. ಇ. ಗೆ ತಿಳಿಸಿದ್ದೇನೆ. ಇನ್ನೊಂದು ವಾರದಲ್ಲಿಯೇ ಕೆಲಸ ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

(v) ಕರ್ನಾಟಕ ಡೈರಿ ನಿಗಮದಲ್ಲಿ ಕೆಲಸ ಮಾಡುವ ನೌಕರರ ಖಾಯಂ ಗೊಳಿಸುವಿಕೆ.

ಶ್ರೀ ಎಸ್. ಜಿ. ರಾಮಲಿಂಗಯ್ಯ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಡೈರಿ ಅಭಿವೃದ್ಧಿ ನಿಗಮವು ಎಕ್ಸ್‌ಟೆನ್‌ಷನ್ ಆಫೀಸರ್ಸ್ ಗ್ರೇಡ್ ಎರಡು ಹುದ್ದೆಗಳಿಗೆ ಲಿಖಿತ ಪರೀಕ್ಷೆಗಾಗಿ ಅರ್ಜಿಗಳನ್ನು ಕರೆದಿ ವ್ಯವಹಾರ ತಾ. ೧೧-೩-೮೪ ರಂದು ಬೆಳಿಗ್ಗೆ ೧೦ ಗಂಟೆಗೆ ಲಿಪಿತ ಪರೀಕ್ಷೆಯನ್ನು ನಡೆಸಲಾಗಿದೆ. ಸುಮಾರು ೮೦೦೦ ಕ್ಕೂ ಮಿಕ್ಕು ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸಲಾಗಿದೆ. ಪ್ರವೇಶ ಪತ್ರದಲ್ಲಿ ಪರೀಕ್ಷಾ ಅವಧಿಯು ಮೂರುಗಂಟೆಗಳೆಂದು ಕಾಣಿಸಿದ್ದರೂ ಪರೀಕ್ಷೆ ಪ್ರಾರಂಭವಾದ ಕೇವಲ ಒಂದೂವರೆ ಗಂಟೆಯಲ್ಲಿ ಅಭ್ಯರ್ಥಿಗಳಿಂದ ಉತ್ತರ ಪತ್ರಿಕೆಗಳನ್ನು ಪಡೆದುಕೊಂಡು ಕಳಿಸಿರುತ್ತಾರೆ ಇದರಿಂದ ಇದರ ಅರಿವಿಲ್ಲದ ಸಾವಿರಾರು ಅಭ್ಯರ್ಥಿಗಳಿಗೆ ತೊಂದರೆಯಾಗಿರುತ್ತೆ. ಪರೀಕ್ಷೆ ಪೂರ್ವನಿಗದಿಯಂತೆ ನಡೆದಿಲ್ಲ. ಕೆ ಡಿ. ಡಿ. ಸಿ. ಯಲ್ಲಿ ದಕ್ಷ ಅಧಿಕಾರಿಗಳಿದ್ದರೂ ಇಂತಹ ಗೊಂದಲಕ್ಕೆ ಕಾರಣಗಳೇನು ? ಈಗಾಗಲೇ ೩೫ ಜನ ಇದೇ ದರ್ಜೆಯಲ್ಲಿ ಕನ್‌ಸಾಲಿಡೇಟೆಡ್ ಪೇ ಮೇಲೆ ಎರಡು ವರುಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ ಇವರನ್ನು ಖಾಯಂಗೊಳಿಸಲು ಇರುವ ಅಡ್ಡಿಯಾದರೂ ಏನಿದೆ? ಇವರ ಭವಿಷ್ಯವೇನಾಗಬೇಕು? ದಯವಿಟ್ಟು ಇವರನ್ನು ಯಾಕೆ ಖಾಯಂ ಗೊಳಿಸಬಾರದು ? ಈ ಬಗ್ಗೆ ಪಶಾಸಂಗೋಪನಾ ಖಾತೆಯ ಸಚಿವರು ಭರವಸೆ ಕೊಡಬೇಕೆಂದು ಕೋರುತ್ತೇನೆ. ನಡೆದಿರುವ ಪರೀಕ್ಷೆಯನ್ನು ಅಕ್ರಮವೆಂದು ಘೋಷಿಸಬೇಕೆಂದು ಸಹ ಕೋರುತ್ತೇನೆ.